aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Political Science (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Political Science

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿ.ಯು.ಸಿ ರಾಜ್ಯಶಾಸ್ತ್ರ (29) ಮಾದರಿ ಪ್ರಶ್ನೆ ಪತ್ರಿಕೆ – 2 : 2026–27

ಸಮಯ: 3 ಗಂಟೆ (ಒಟ್ಟು ಪ್ರಶ್ನೆಗಳ ಸಂಖ್ಯೆ: 37) **ಗರಿಷ್ಟ ಅಂಕಗಳು: 80**

(Kannada version)

ಸೂಚನೆಗಳು:

1. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.
2. ಬಲಬದಿಯಲ್ಲಿ ಅಂಕಗಳನ್ನು ಸೂಚಿಸಲಾಗಿದೆ.
3. ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆದು ಅವುಗಳ ಉತ್ತರಗಳನ್ನು ಬರೆಯಿರಿ.
4. ಭಾಗ – ಎ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಭಾಗ – ಎ

I. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ ಬರೆಯಿರಿ: **5x1=5**

1. ಪ್ಲೇಟೋರವರು ರಚಿಸಿದ ಕೃತಿ

   ಎ) ದಿ ಪಾಲಿಟಿಕ್ಸ್ ಬಿ) ದಿ ರಿಪಬ್ಲಿಕ್

   ಸಿ) ದಿ ಪ್ರಿನ್ಸ್ ಡಿ) ಡಿ ರಿಪಬ್ಲಿಕಾ

2. 'ರಾಜ್ಯ' ಎಂಬ ಪದವನ್ನು ಮೊದಲು ಬಳಸಿದವರು

   ಎ) ಸ್ಯಾಕ್ರೆಟಿಸ್ ಬಿ) ಪ್ಲೇಟೋ

   ಸಿ) ಅರಿಸ್ಟಾಟಲ್ ಡಿ) ಮೆಕೆವೆಲ್ಲಿ

3. ಸ್ವಾತಂತ್ರ್ಯ. ಸಮಾನತೆ ಮತ್ತು ಭ್ರಾತೃತ್ವ ಆದರ್ಶಗಳನ್ನು ಎತ್ತಿ ಹಿಡಿದ ಕ್ರಾಂತಿ

   i) ಅಮೇರಿಕಾ ಕ್ರಾಂತಿ ii) ಫ್ರಾನ್ಸ್ ಕ್ರಾಂತಿ

   iii) ಔದ್ಯೋಗಿಕ ಕ್ರಾಂತಿ iv) ಮಿಲಿಟರಿ ಕ್ರಾಂತಿ

   ಎ) (i) ಮತ್ತು (ii) ಬಿ) (ii) ಮಾತ್ರ

   ಸಿ) (i) ಮತ್ತು (iii) ಡಿ) (ii) ಮತ್ತು (iv)

4. 'ಫೆಡರೇಷನ್' ನ ಮೂಲ ಪದ

   ಎ) Fodas ಬಿ) Foedus

   ಸಿ) Fodar ಡಿ) Forus

5. ಭಾರತದಲ್ಲಿ ಅಂತಿಮ ಅಪೀಲು ನ್ಯಾಯಾಲಯ

   ಎ) ಸರ್ವೋಚ್ಚ ನ್ಯಾಯಾಲಯ ಬಿ) ಉಚ್ಚ ನ್ಯಾಯಾಲಯ

   ಸಿ) ಕೌಟುಂಬಿಕ ನ್ಯಾಯಾಲಯ ಡಿ) ಕಂದಾಯ ನ್ಯಾಯಾಲಯ

II. ಕೆಳಗಿನ ಪ್ರಶ್ನೆಗಳಿಗೆ ಖಾಲಿ ಬಿಟ್ಟ ಸ್ಥಳ ಭರ್ತಿ ಮಾಡಿ: **5x1=5**

(ಲಿಬರ್, ಇಂಗ್ಲೆಂಡ್, ಪ್ಲೇಟೋ, 30 ತಿಂಗಳು, 44ನೇ ತಿದ್ದುಪಡಿ)

6. _____ರವರು ಹೇಳಿದಂತೆ ಒಂದು ರಾಜ್ಯದ ಜನಸಂಖ್ಯೆ 5040

7. _____ಎಂಬುದು ಸ್ವಾತಂತ್ರ್ಯದ ಮೂಲ ಪದವಾಗಿದೆ.

8. ಅಲಿಖಿತ ಸಂವಿಧಾನಕ್ಕೆ ಒಂದು ಉತ್ತಮ ಉದಾಹರಣೆ_____

9. _____ಯು ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದು ಹಾಕಿತು.

10. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರ ಅಧಿಕಾರಾವಧಿ_____

III. ಹೊಂದಿಸಿ ಬರೆಯಿರಿ: **5x1=5**

11. ಎ) ಪ್ರಾಯೋಗಿಕ ಅಧ್ಯಯನ	i) ರಾಷ್ಟ್ರಪತಿ
ಬಿ) ಸುಗ್ರೀವಾಜ್ಞೆ	ii) ತಾತ್ಕಾಲಿಕ ಸರ್ಕಾರಿ ವ್ಯವಸ್ಥೆ
ಸಿ) ಪುರಾತನ ನಿರಂಕುಶತ್ವ	iii) ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಡಿ) ಪಿ.ಐ.ಎಲ್	iv) ಮುಖ್ಯ ಕಾರ್ಯದರ್ಶಿ
ಇ) ಜಿಲ್ಲಾ ಪಂಚಾಯಿತಿಯ ಆಡಳಿತಾದಿಕಾರಿ	v) ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ
	vi) ವಿಜ್ಞಾನದ ಒಂದು ಲಕ್ಷಣ

IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: **5x1=5**

12. ಪ್ರತ್ಯಕ್ಷ ಪ್ರಜಾಪ್ತಭುತ್ವದ ಅರ್ಥವನ್ನು ನೀಡಿ.

13. ರಾಜ್ಯಗಳಿಗೆ ರಾಜ್ಯಪಾಲರನ್ನು ಯಾರು ನೇಮಿಸುವರು?

14. ಭಾರತದ ಉಪ ರಾಷ್ಟ್ರಪತಿಗಳ ಅಧಿಕಾರಾವಧಿ ಎಷ್ಟು?

15. ಮೇಲ್ಮನವಿ ಎಂದರೇನು?

16. ಭಾರತದಲ್ಲಿ ಕೌಟುಂಬಿಕ ನ್ಯಾಯಾಲಯದ ಕಾಯ್ದೆಯು ಯಾವಾಗ ಜಾರಿಗೆ ಬಂದಿತು?

ಭಾಗ – ಬಿ

V. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2–3 ವಾಕ್ಯಗಳಲ್ಲಿ ಉತ್ತರಿಸಿ: **5x2=10**

17. ಕಲ್ಯಾಣ ರಾಜ್ಯ ಎಂದರೇನು?

18. ಪರಮಾಧಿಕಾರವನ್ನು ವ್ಯಾಖ್ಯಾನಿಸಿ.

19. ಕಾನೂನಿನ ಆಳ್ವಿಕೆ ಎಂದರೇನು?

20. ಸಂಸದೀಯ ಸರ್ಕಾರದ ಅರ್ಥವನ್ನು ತಿಳಿಸಿ.

21. ಪ್ರಮಾಣಾನುಗುಣ ಪ್ರಾತಿನಿಧ್ಯದ ಅರ್ಥವನ್ನು ಬರೆಯಿರಿ.

22. ಭಾರತ ಸಂವಿಧಾನ ರಚನಾ ಸಭೆಯ ಕುರಿತು ಎರಡು ವಾಕ್ಯಗಳಲ್ಲಿ ಬರೆಯಿರಿ.

23. ನ್ಯಾಯಿಕ ವಿಮರ್ಶೆ ಎಂದರೇನು?

24. ಪಂಚಾಯತ್ ರಾಜ್ ವ್ಯವಸ್ಥೆಯು ಮೊದಲಿಗೆ ಎಲ್ಲಿ ಮತ್ತು ಯಾವಾಗ ಅನುಷ್ಠಾನಕ್ಕೆ ಬಂದಿತು?

ಭಾಗ – ಸಿ

VI. ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15–20 ವಾಕ್ಯಗಳಲ್ಲಿ ಉತ್ತರಿಸಿ: **6x5=30**

25. ರಾಜ್ಯಶಾಸ್ತ್ರದ ವಿಕಾಸವನ್ನು ಬರೆಯಿರಿ.

26. ರಾಜ್ಯ ಮತ್ತು ಸಮಾಜದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

27. ಆರ್ಥಿಕ ಸ್ವಾತಂತ್ರ್ಯವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

28. ಸಂಯುಕ್ತ ಸರ್ಕಾರದ ಲಕ್ಷಣಗಳನ್ನು ವಿವರಿಸಿ.

29. ವಿಧಾನ ಪರಿಷತ್ತಿನ ರಚನೆಯ ಕುರಿತು ಒಂದು ಟಿಪ್ಪಣಿ ಬರೆಯಿರಿ.

30. ಶಾಸನ ರಚನಾ ಪ್ರಕ್ರಿಯೆಯ ಮೂರು ವಾಚನಗಳಾವುವು? ವಿವರಿಸಿ.

31. ಶಾಸಕಾಂಗದ ಮಹತ್ವವನ್ನು ವಿವರಿಸಿ.

32. ಲೋಕ್ ಅದಾಲತ್ ಕುರಿತು ಒಂದು ಟಿಪ್ಪಣಿಯನ್ನು ಬರೆಯಿರಿ.

33. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸಲು ಕಾರಣವಾಗುವ ಐದು ಅಂಶಗಳನ್ನು ಬರೆಯಿರಿ.

ಭಾಗ – ಡಿ

VII. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 30–40 ವಾಕ್ಯಗಳಲ್ಲಿ ಉತ್ತರಿಸಿ: **2x10=20**

34. ಪ್ರಜಾಸತ್ತಾತ್ಮಕ ಸರ್ಕಾರದ ಲಕ್ಷಣಗಳನ್ನು ವಿವರಿಸಿ.

35. ಭಾರತೀಯ ಪೌರರ ಮೂಲಭೂತ ಹಕ್ಕುಗಳನ್ನು ವಿವರಿಸಿ.

36. ಭಾರತ ರಾಷ್ಟ್ರಪತಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

37. ನಗರ ಸಭೆಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.